# ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಗದಗ

ಎಸ್‌ಸಿ ನಂ. 56/2022

ಸಿಡಬ್ಲ್ಯೂ: 10 / ಪಿಡಬ್ಲ್ಯೂ: 11

ದಿನಾಂಕ: 28.02.2025

**ಸತ್ಯ ಪ್ರತಿಜ್ಞೆ ಮಾಡಿಸಲಾಯಿತು.**

| | | |
|---|---|---|
| ಸಾಕ್ಷಿದಾರರ ಹೆಸರು | : | ರೂಪಲೆಪ್ಪ ನಾಯಕ |
| ತಂದೆಯ ಹೆಸರು | : | ನೇಮಪ್ಪ |
| ವಯಸ್ಸು | : | 68 ವರ್ಷ |
| ಉದ್ಯೋಗ | : | ಒಕ್ಕಲುತನ |
| ವಾಸ ಸ್ಥಳ | : | ಅತ್ತಿಕಟ್ಟಿ ತಾಂಡಾ |

## ಮುಖ್ಯ ವಿಚಾರಣೆ: ಸರ್ಕಾರಿ ಅಭಿಯೋಜಕರವರಿಂದ:

1. ಪ್ರಾಸಾ-1 ರವರು ನನಗೆ ಗೊತ್ತು. ಚಾಸಾ-8, ಪ್ರಾಸಾ-5, ಚಾಸಾ-11, 12 ಮತ್ತು ಪ್ರಾಸಾ-6 ರವರು ನನಗೆ ಪರಿಚಯ ಇರುತ್ತಾರೆ. ಮೃತ ಸೋಮಲೆಪ್ಪ ನಾಯಕ ಇವರ ಪರಿಚಯ ನನಗೆ ಇತ್ತು. ಪ್ರಾಸಾ-1 ರವರು ಮೃತ ಸೋಮಲೆಪ್ಪ ನಾಯಕ ಇವರ ಹೆಂಡತಿ ಇರುತ್ತಾಳೆ. ಮೃತ ಸೋಮಲೆಪ್ಪ ನಾಯಕ ಇವರು ಒಕ್ಕಲುತನ ಮಾಡುತ್ತಿದ್ದು, ಅವರು ತಾಂಡಾದ ಯಜಮಾನರಾಗಿದ್ದರು.

2. ನ್ಯಾಯಾಲಯದ ವಿ.ಸಿ.ಯಲ್ಲಿ ಕಾಣಿಸುವ ಆರೋಪಿ ನನಗೆ ಪರಿಚಯ ಇರುತ್ತಾನೆ. ಆರೋಪಿಗೆ ಮದುವೆಯಾಗಿರುತ್ತದೆ. ಆತನಿಗೆ ಮೂರು ಜನ ಹೆಣ್ಣುಮಕ್ಕಳು ಹಾಗೂ ಇಬ್ಬರು ಗಂಡು ಮಕ್ಕಳು ಇರುತ್ತಾರೆ.

3. ಆರೋಪಿಗೂ ಮತ್ತು ಆತನ ಹೆಂಡತಿಗೂ ಮಧ್ಯ ಜಗಳ ಆಗುತ್ತಿದ್ದುದರಿಂದ, ಆರೋಪಿಯ ಹೆಂಡತಿ ತನ್ನ ತವರು ಮನೆಯಲ್ಲಿ ಇರುತ್ತಾಳೆ. ಆದ್ದರಿಂದ ಆರೋಪಿಯು ತನ್ನ ಸಂಸಾರವನ್ನು ಸರಿ ಮಾಡಿಕೊಡು ಎಂದು ಮೃತ ಸೋಮಲೆಪ್ಪ ನಾಯಕ ಇವರನ್ನು ಕೇಳುತ್ತಿದ್ದನು. ಒಂದು ಸಾರಿ ಸದರಿ ಸೋಮಲೆಪ್ಪ ನಾಯಕ ಇವರು ಆರೋಪಿಯ ಸಂಸಾರವನ್ನು ಸರಿ ಮಾಡಿಕೊಟ್ಟಿದ್ದರು. ನಂತರ ಆರೋಪಿಯ ಹೆಂಡತಿಯು ತನ್ನ ತವರು ಮನೆಗೆ ಹೋಗಿ ವಾಪಸ್ ಬಂದಿರಲಿಲ್ಲ. ಆದ್ದರಿಂದ ಆರೋಪಿಯು ಮೃತ ಸೋಮಲೆಪ್ಪ ನಾಯಕ ಇವರಿಗೆ ತನ್ನ ಸಂಸಾರ ಸರಿ ಮಾಡಿಕೊಡಲಿಲ್ಲ ಎಂದು ಸದರಿ ಸೋಮಲೆಪ್ಪನ ಮೇಲೆ ಸಿಟ್ಟು ಇಟ್ಟುಕೊಂಡಿದ್ದನು ಮತ್ತು ಸೋಮಲೆಪ್ಪನಿಗೆ ನನ್ನ ಸಂಸಾರವನ್ನು

ಸರಿ ಮಾಡಿಲ್ಲ, ನಿನ್ನನ್ನು ನೋಡಿಕೊಳ್ಳುತ್ತೇನೆ ಎಂದು ಊರಿನಲ್ಲಿ ಯಾವುದೇ ಕಾರ್ಯಕ್ರಮ ಇದ್ದಾಗ ಅಲ್ಲಿ ಸೋಮಲೆಪ್ಪ ನಾಯಕ ಕಂಡರೆ ಹೇಳುತ್ತಿದ್ದನು. ಈ ಕಾರಣಕ್ಕಾಗಿ ಒಂದೊಂದು ಸಾರಿ ಸದರಿ ಸೋಮಲೆಪ್ಪ ನಾಯಕ ಈತನು ಕೆಲವು ಕಾರ್ಯಕ್ರಮಗಳಿಗೆ ಬರುತ್ತಿರಲಿಲ್ಲ.

4. ಈಗ ಸುಮಾರು 3 ವರ್ಷಗಳ ಹಿಂದೆ, ನಾವು ಶಿವಾಜಿ/ಸೇವಾಲಾಲ ದೇವಸ್ಥಾನವನ್ನು ಉದ್ಘಾಟನೆ ಮಾಡುವ ವಿಚಾರಕ್ಕೆ ಸಂಬಂಧಿಸಿದಂತೆ ನಾನು, ಮೃತ ಸೋಮಲೆಪ್ಪ ನಾಯಕ, ಚಾಸಾ-11, 12 ಮತ್ತು ಪ್ರಾಸಾ-10 ರವರು ಸೇರಿ ಸದರಿ ದೇವಸ್ಥಾನದಲ್ಲಿಯೇ ರಾತ್ರಿ 07.30 ಗಂಟೆಗೆ ಕುಳಿತುಕೊಂಡು ಮಾತನಾಡುತ್ತಿದ್ದಾಗ, ರಾತ್ರಿ 08.00 ಗಂಟೆ ಸುಮಾರಿಗೆ ಆರೋಪಿ ಅಲ್ಲಿಗೆ ಬಂದು ತನ್ನ ಕೈಯಲ್ಲಿ ಚಪ್ಪಲಿ ಹಿಡಿದುಕೊಂಡು ಮೃತ ಸೋಮಲೆಪ್ಪ ನಾಯಕ ಈತನಿಗೆ ಅಲ್ಲೇನು ನ್ಯಾಯ ಹೇಳುತ್ತೀ, ಹೊರಗೆ ಎದ್ದು ಬಾ ಎಂದು ಹೇಳಿರುತ್ತಾನೆ. ಆಗ ನಾನು ಆರೋಪಿಗೆ ಹಿರಿಯರು ಇರುತ್ತಾರೆ ಹಾಗೆಲ್ಲಾ ಬೈದಾಡಬೇಡಾ ಎಂದು ಹೇಳಿರುತ್ತೇನೆ. ನಂತರ ಆರೋಪಿಯು ಚಪ್ಪಲಿಯನ್ನು ಅಲ್ಲಿಯೇ ಬಿಟ್ಟು, ಸದರಿ ದೇವಸ್ಥಾನದ ಒಳಗೆ ಬಂದು, ಕಂಬಕ್ಕೆ ಕುಳಿತಿದ್ದ ಸೋಮಲೆಪ್ಪ ನಾಯಕ ಈತನಿಗೆ ಕಾಲಿನಿಂದ ಒದ್ದಿರುತ್ತಾನೆ, ಆಗ ಸೋಮಲೆಪ್ಪನು ಬಿದ್ದಿರುತ್ತಾನೆ, ನಾನು ಆತನನ್ನು ಎಬ್ಬಿಸಿರುತ್ತೇನೆ, ಆಗ ಆರೋಪಿಯು ಸೋಮಲೆಪ್ಪ ನಾಯಕನ ಎದೆಯ ಮೇಲಿರುವ ಅಂಗಿಯನ್ನು ಹಿಡಿದು, ಚಾಕುವಿನಿಂದ ಸೋಮಲೆಪ್ಪನ ಕುತ್ತಿಗೆಗೆ, ಹೊಕ್ಕಳಕ್ಕೆ, ಹೊಟ್ಟೆಗೆ, ಎಡಕೈಗೆ ಚುಚ್ಚಿರುತ್ತಾನೆ. ಇದರಿಂದಾಗಿ ಸೋಮಲೆಪ್ಪ ನಾಯಕನಿಗೆ ರಕ್ತಗಾಯಗಳಾದವು. ಆಗ ಅಲ್ಲಿದ್ದ ನಾವೆಲ್ಲಾ ಸೇರಿ ಬಿಡಿಸಿರುತ್ತೇವೆ. ಆಗ ಪ್ರಾಸಾ-10 ರವರು ಆರೋಪಿಯ ನಡದಲ್ಲಿರುವ ಇನ್ನೊಂದು ಜಂಬೆಯನ್ನು ಕಸಿದುಕೊಂಡಿರುತ್ತಾರೆ. ನಂತರ ಆರೋಪಿಯು ಚಾಕುವನ್ನು ತೆಗೆದುಕೊಂಡು ತನ್ನ ಮನೆ ಕಡೆಗೆ ಹೊರಟು ಹೋಗಿರುತ್ತಾನೆ.

5. ನಂತರ ಅಲ್ಲಿಗೆ ಪ್ರಾಸಾ-1 ರವರು ಮತ್ತು ಆಕೆಯ ಅಳಿಯ ಓಡಿ ಬಂದಿರುತ್ತಾರೆ. ಆಗ ಅಲ್ಲಿದ್ದ ನಾವು ಪ್ರಾಸಾ-1 ರವರಿಗೆ ನಡೆದ ವಿಚಾರವನ್ನು ತಿಳಿಸಿರುತ್ತೇವೆ. ನಂತರ ಪ್ರಾಸಾ-1 ರವರು ಸೋಮಲೆಪ್ಪ ನಾಯಕ ಇವರನ್ನು ನಮ್ಮ ಊರಿನ ಒಬ್ಬರ ವಾಹನದಲ್ಲಿ ಹಾಕಿಕೊಂಡು ಗದಗ ಜಿಲ್ಲಾ ಆಸ್ಪತ್ರೆಗೆ ಹೋಗಿರುತ್ತಾರೆ. ಈ ಘಟನೆಯು ರಾತ್ರಿ 08.00 ರಿಂದ 08.15 ರ ವರೆಗೆ ಆಗಿರುತ್ತದೆ.

6. ಗದಗ ಜಿಲ್ಲಾ ಆಸ್ಪತ್ರೆಯಲ್ಲಿ ವೈದ್ಯರು ಪರಿಶೀಲನೆ ಮಾಡಿ, ಸೋಮಲೆಪ್ಪ ನಾಯಕ ಮೃತಪಟ್ಟಿರುತ್ತಾರೆ ಎಂದು ತಿಳಿಸಿರುತ್ತಾರೆ.

7. ಘಟನೆಯ ಬಗ್ಗೆ ಪೋಲೀಸರಿಗೆ ದೂರನ್ನು ಪ್ರಾಸಾ-1 ರವರು ಕೊಟ್ಟಿರುತ್ತಾರೆ. ಪೋಲೀಸರು ನನ್ನನ್ನು ವಿಚಾರಿಸಿರುತ್ತಾರೆ.

8. ಆರೋಪಿಯು ಮೃತ ಸೋಮಲೆಪ್ಪ ನಾಯಕನಿಗೆ ಚುಚ್ಚಲು ಉಪಯೋಗಿಸಿದ ಚಾಕುವನ್ನು ನೋಡಿದರೆ ಗುರುತಿಸುತ್ತೇನೆ. ಅದನ್ನು ಈಗ ನೋಡುತ್ತಿದ್ದು, ಅದನ್ನು ಈಗಾಗಲೇ ಮು.ಮಾ.6 ಎಂದು ಗುರುತಿಸಲಾಗಿರುತ್ತದೆ.

9. ಆರೋಪಿಯ ಹತ್ತಿರ ಇದ್ದ ಇನ್ನೊಂದು ಜಂಬೆಯನ್ನು ನೋಡಿದರೆ ಗುರುತಿಸುತ್ತೇನೆ. ಅದನ್ನು ಈಗ ನೋಡುತ್ತಿದ್ದು, ಅದನ್ನು ಈಗಾಗಲೇ ಮು.ಮಾ.1 ಎಂದು ಗುರುತಿಸಲಾಗಿರುತ್ತದೆ.

10. ಘಟನೆಯ ಸಮಯದಲ್ಲಿ ಮೃತ ಸೋಮಲೆಪ್ಪ ನಾಯಕನು ಧರಿಸಿದ್ದ ಬನಿಯನ ಮತ್ತು ಮತ್ತು ಲುಂಗಿಯನ್ನು ನೋಡಿದರೆ ಗುರುತಿಸುತ್ತೇನೆ. ಅವುಗಳನ್ನು ಈಗ ನೋಡುತ್ತಿದ್ದು, ಅವುಗಳನ್ನು ಈಗಾಗಲೇ ಮು.ಮಾ.2 ಮತ್ತು 4 ಎಂದು ಕ್ರಮವಾಗಿ ಗುರುತಿಸಲಾಗಿರುತ್ತದೆ.

11. ಘಟನೆಯ ಸಮಯದಲ್ಲಿ ಆರೋಪಿಯು ಧರಿಸಿದ್ದ ಫುಲ ತೋಳಿನ ಶರ್ಟನ್ನು ನೋಡಿದರೆ ಗುರುತಿಸುತ್ತೇನೆ. ಅದನ್ನು ಈಗ ನೋಡುತ್ತಿದ್ದು, ಅದನ್ನು ಈಗಾಗಲೇ ಮು.ಮಾ.8 ಎಂದು ಗುರುತಿಸಲಾಗಿರುತ್ತದೆ.

12. ಆರೋಪಿಯು ಸೋಮಲೆಪ್ಪ ನಾಯಕನಿಗೆ ಚಾಕುವಿನಿಂದ ಚುಚ್ಚಿದ್ದರಿಂದ ರಕ್ತವು ದೇವಸ್ಥಾನದ ಒಳಗೆಲ್ಲಾ ಆಗಿತ್ತು. ಈಗ ತೋರಿಸಿದ ನಿಪಿ-2 ರಲ್ಲಿ ದೇವಸ್ಥಾನದ ಭಾವಚಿತ್ರ ಇರುತ್ತದೆ. ಈಗ ತೋರಿಸಿದ ನಿಪಿ-3 ರಲ್ಲಿ ಘಟನಾ ಸ್ಥಳದ ಭಾವಚಿತ್ರ ಇರುತ್ತದೆ.

13. **ಘಟನೆಯಾದ 3 – 4 ದಿನಗಳ ನಂತರ, ನಾನು ಮುಂಡರಗಿ ನ್ಯಾಯಾಲಯದ ನ್ಯಾಯಾಧೀಶರ ಮುಂದೆ ಹೇಳಿಕೆಯನ್ನು ಕೊಟ್ಟಿರುತ್ತೇನೆ. ಈಗ ಸದರಿ ಹೇಳಿಕೆಯನ್ನು ಈಗ ನೋಡುತ್ತಿದ್ದು, ಅದನ್ನು ನಿಪಿ-20 ಎಂದು, ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು.**

14. ಆರೋಪಿಯು ಸೋಮಲೆಪ್ಪ ನಾಯಕ ಈತನು ತನ್ನ ಸಂಸಾರವನ್ನು ಸರಿ ಮಾಡಲಿಲ್ಲ ಎಂದು ಸದರಿ ಸೋಮಲೆಪ್ಪನಿಗೆ ಚಾಕುವಿನಿಂದ ತಿವಿದು, ಆತನ ಕೊಲೆ ಮಾಡಿರುತ್ತಾನೆ.

**<u>ಪಾಟಿ ಸವಾಲುಃ ಶ್ರೀ ಎಸ್.ವಿ. ಗ್ರಾಮಪುರೋಹಿತ, ಆರೋಪಿ ಪರ (CLADC) ವಕೀಲರಿಂದಃ</u>**

15. ನಾನು, ಪ್ರಾಸಾ-1, ಚಾಸಾ-8, ಪ್ರಾಸಾ-5, ಚಾಸಾ-11 ಮತ್ತು 12 ರವರು ಒಂದೇ ಸಮಾಜಕ್ಕೆ ಸೇರಿರುತ್ತೇವೆ ಮತ್ತು ಒಬ್ಬರಿಗೊಬ್ಬರು ಆಪ್ತರಾಗಿದ್ದೇವೆ ಎಂದರೆ ಸರಿ.

16. ಆರೋಪಿಯ ಹೆಂಡತಿ ಹೆಸರು ನನಗೆ ಗೊತ್ತಿಲ್ಲ. ಆರೋಪಿ ಮತ್ತು ಆತನ ಹೆಂಡತಿಯ

ಮಧ್ಯ ಜಗಳ ಯಾವ ಕಾರಣಕ್ಕೆ ಇತ್ತು ಎಂದು ನನಗೆ ಗೊತ್ತಿಲ್ಲ. ಮೃತ ಸೋಮಲೆಪ್ಪ ನಾಯಕನು ಆರೋಪಿ ಮತ್ತು ಆತನ ಹೆಂಡತಿಯ ಮಧ್ಯ ಎಷ್ಟು ಸಾರಿ ಪಂಚಾಯತಿ ಮಾಡಿರುತ್ತಾನೆ ಎಂದರೆ ಸಾಕ್ಷಿಯು, ನಾನು, ಸೋಮಲೆಪ್ಪ ನಾಯಕ ಮತ್ತು ಊರಿನ ಹಿರಿಯರು ಎರಡು ಸಾರಿ ಪಂಚಾಯತಿ ಮಾಡಿದ್ದೇವೆ ಎಂದು ಹೇಳಿರುತ್ತಾರೆ. ಆ ಪಂಚಾಯತಿಗಳನ್ನು ಯಾವ ಯಾವ ಇಸವಿಯಲ್ಲಿ ಮಾಡಿದ್ದೆವು ಎಂದು ನನಗೆ ಹೇಳಲು ಆಗುವುದಿಲ್ಲ. ಆರೋಪಿಯು ತನ್ನ ಹೆಂಡತಿ ಜೊತೆ ಜಗಳ ಮಾಡಿ ಆಕೆಯನ್ನು ಓಡಿಸುತ್ತಿದ್ದುದರಿಂದ, ಅವರ ಮಧ್ಯ ತಕರಾರು ಇತ್ತು.

17. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆಯೇ ಮುಂಡರಗಿ ನ್ಯಾಯಾಲಯದಲ್ಲಿ ಹೇಳಿಕೆಯನ್ನು ಕೊಟ್ಟಿರುತ್ತೇನೆ. ಆ ದಿನ ನಾನು, ಪ್ರಾಸಾ-1 ಮತ್ತು ಪ್ರಾಸಾ-10 ರವರು ಮುಂಡರಗಿ ನ್ಯಾಯಾಲಯಕ್ಕೆ ಹೋಗಿದ್ದೆವು.

18. ಆರೋಪಿಗೂ ಮತ್ತು ಮೃತ ಸೋಮಲೆಪ್ಪ ನಾಯಕನಿಗೂ ವೈಯಕ್ತಿಕ ದ್ವೇಷ ಇರಲಿಲ್ಲ ಎಂದರೆ ಸರಿ. ಸಾಕ್ಷಿ ಸ್ವತಃ, ಆರೋಪಿಯು ತನ್ನ ಸಂಸಾರವನ್ನು ಸರಿ ಮಾಡಿರುವುದಿಲ್ಲ ಎಂದು ಮೃತ ಸೋಮಲೆಪ್ಪ ನಾಯಕನಿಗೆ ಹೇಳುತ್ತಿದ್ದನು ಎಂದು ಹೇಳಿರುತ್ತಾರೆ. ಆರೋಪಿಯು ಮೃತ ಸೋಮಲೆಪ್ಪ ನಾಯಕ ಇವರಿಗೆ ತನ್ನ ಸಂಸಾರ ಸರಿ ಮಾಡಿಕೊಡಲಿಲ್ಲ ಎಂದು ಸದರಿ ಸೋಮಲೆಪ್ಪನ ಮೇಲೆ ಸಿಟ್ಟು ಇಟ್ಟುಕೊಂಡಿದ್ದನು ಮತ್ತು ಸೋಮಲೆಪ್ಪನಿಗೆ ನನ್ನ ಸಂಸಾರವನ್ನು ಸರಿ ಮಾಡಿಲ್ಲ, ನಿನ್ನನ್ನು ನೋಡಿಕೊಳ್ಳುತ್ತೇನೆ ಎಂದು ಊರಿನಲ್ಲಿ ಯಾವುದೇ ಕಾರ್ಯಕ್ರಮ ಇದ್ದಾಗ ಅಲ್ಲಿ ಸೋಮಲೆಪ್ಪ ನಾಯಕ ಕಂಡರೆ ಹೇಳುತ್ತಿದ್ದನು ಎಂದು ನಾನು ಪ್ರಾಸಾ-1 ರವರ ಮಾತು ಕೇಳಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

19. ಆ ದಿನ ನಾನು, ಚಾಸಾ-11, 12, ಮೃತ ಸೋಮಲೆಪ್ಪ ಮತ್ತು ಪ್ರಾಸಾ-10 ರವರು ಇದ್ದೆವು ಮತ್ತು ನಮ್ಮನ್ನು ಹೊರತುಪಡಿಸಿ, ಬೇರೆ ಯಾರೂ ಇರಲಿಲ್ಲ.

20. ಸದರಿ ಸೇವಾಲಾಲ ದೇವಸ್ಥಾನವು ಸಾರ್ವಜನಿಕ ಸ್ಥಳದಲ್ಲಿ ಇರುತ್ತದೆ ಎಂದರೆ ಸರಿ. ಆರೋಪಿಯು ಬಂದ ತಕ್ಷಣ ಚಪ್ಪಲಿಯನ್ನು ಕೈಯಲ್ಲಿ ತೆಗೆದುಕೊಂಡಿರುತ್ತಾನೆ. ಆರೋಪಿ ಕೂಡಾ ಸೇವಾಲಾಲ ದೇವಸ್ಥಾನಕ್ಕೆ ನಡೆದುಕೊಳ್ಳುತ್ತಾನೆ ಎಂದರೆ ಸರಿ. ಆರೋಪಿಯು ಚಪ್ಪಲಿ ಹಿಡಿದುಕೊಂಡು ಬಂದು, ಗಲಾಟೆ ಮಾಡಿರುತ್ತಾನೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಯು ಸೋಮಲೆಪ್ಪ ನಾಯಕ ಈತನಿಗೆ ಕಾಲಿನಿಂದ ಒದ್ದಿರುತ್ತಾನೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಯು ಚಾಕುವಿನಿಂದ ಸೋಮಲೆಪ್ಪ ನಾಯಕ ಈತನಿಗೆ ಚುಚ್ಚುತ್ತಿರುವಾಗ ಬಿಡಿಸುವ ಪ್ರಯತ್ನವನ್ನು ಮಾಡಿದ್ದೀರಾ ಎಂದರೆ ಸಾಕ್ಷಿಯು, ಬಿಡಿಸುವ ಪ್ರಯತ್ನದಲ್ಲಿದ್ದಾಗಲೇ ಆರೋಪಿಯು ಚಾಕುವಿನಿಂದ ಚುಚ್ಚಿರುತ್ತಾನೆ ಎಂದು ಹೇಳಿರುತ್ತಾರೆ.

21. ಆರೋಪಿಯು ಚಾಕುವಿನಿಂದ ಸೋಮಲೆಪ್ಪ ನಾಯಕ ಈತನಿಗೆ ಚುಚ್ಚುತ್ತಿರುತ್ತಾನೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಯು ಓಡಿ ಹೋಗುತ್ತಿರುವಾಗ, ಆತನನ್ನು ತಡೆಯಲು ಪ್ರಯತ್ನ ಮಾಡಿರುತ್ತೀರಾ ಎಂದರೆ ಸಾಕ್ಷಿಯು, ಆತನ ಹತ್ತಿರ ಚಾಕು ಇದ್ದುದರಿಂದ ಆತನನ್ನು ತಡೆಯಲು ಪ್ರಯತ್ನ ಮಾಡಿಲ್ಲ ಎಂದು ಹೇಳಿರುತ್ತಾರೆ. ಆರೋಪಿ ಓಡಿ ಹೋಗುವಾಗ ಆತನ ಕೈಯಲ್ಲಿ ಮು.ಮಾ. 6 ಇತ್ತು. ಮು.ಮಾ.6 ಆರೋಪಿಯ ಚಾಕು ಇರುವುದಿಲ್ಲ ಎಂದರೆ ಸರಿಯಲ್ಲ.

22. ಪ್ರಾಸಾ-1 ರವರು ಸೋಮಲೆಪ್ಪ ನಾಯಕ ಇವರನ್ನು ನಮ್ಮ ಊರಿನ ಒಬ್ಬರ ವಾಹನದಲ್ಲಿ ಹಾಕಿಕೊಂಡು ಗದಗ ಜಿಲ್ಲಾ ಆಸ್ಪತ್ರೆಗೆ ಹೋಗಿರುತ್ತಾರೆ ಮತ್ತು ಗದಗ ಜಿಲ್ಲಾ ಆಸ್ಪತ್ರೆಯಲ್ಲಿ ವೈದ್ಯರು ಪರಿಶೀಲನೆ ಮಾಡಿ, ಸೋಮಲೆಪ್ಪ ನಾಯಕ ಮೃತಪಟ್ಟಿರುತ್ತಾರೆ ಎಂದು ತಿಳಿಸಿರುತ್ತಾರೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

23. ಆ ದಿನ ಅರೋಪಿಯು ಸ್ಥಳದಲ್ಲಿ ಇರಲಿಲ್ಲ ಮತ್ತು ನಮ್ಮ ಸಮಾಜದವರ ಮಾತನ್ನು ಆರೋಪಿಯು ಕೇಳದೇ ಇದ್ದುದರಿಂದ, ಆತನ ವಿರುದ್ಧ ಸುಳ್ಳು ದೂರನ್ನು ನೀಡಿ, ಸುಳ್ಳು ಸಾಕ್ಷ್ಯವನ್ನು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ - ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ, ನನ್ನ ಉಕ್ತ ಲೇಖನದಂತೆ, ಸಾಕ್ಷಿಯ ಸಾಕ್ಷವನ್ನು ಬೆರಳಚ್ಚು ಮಾಡಿಸಲಾಯಿತು.)**

**ಓ ಹೇ ಕೇ ಸರಿ ಆದೆ.**

**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**

**ಗದಗ**